# ಕೇರಳ ಪಾಠಾವಳಿ
# KERALA READER

## ಕನ್ನಡ
## KANNADA

### ತರಗತಿ
### STANDARD

I

## ಭಾಗ - 2

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2024

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - I (Part 2)

---

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT Kerala
First Edition : 2024
Printed at : KBPS Kakkanad, Kochi-30
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ನಮ್ಮ ಕಣ್ಣಿಗೆ ಸಮಾನವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾ ಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷೆಯನ್ನು ಬೆಳೆಸಿಕೊಳ್ಳುವುದನ್ನು ಕಲಿಯಬೇಕು.

ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕಗಳು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತವೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತವೆ, ಹಿತೈಷಿಗಳಂತೆ ಇರುತ್ತವೆ ಎನ್ನಬಹುದು. ಪಠ್ಯಪುಸ್ತಕವು ನಮಗೆ ಉಪಯುಕ್ತವಾಗಬೇಕು, ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡಬೇಕು ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಅವು ಸಹಾಯ ಮಾಡಬೇಕು. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE

## KANNADA I - PART 2

**Advisor**
Shivashankara P., Asst. Professor, GPM College, Manjeshwar

**Chairperson**
Dr. Savitha B., Asst. Professor, Government College, Kasaragod

**Experts**
Dr. Narendra Rai Derla, Professor, GFW College, Puttur
Dr. T.K. Sharath Kumar, Associate Professor, GFGC Belthangady
Yatheesh Kumar Rai K., Rtd. Principal, GHSS Belluru

**Participants**
Yashoda K.A., HM, GUPS Adkathbail
Vanaja C.H., LPST, GHSS Adhur
Surekha K., LPST, GHS Peradala
Surekha A., LPST, GUPS Kasaragod
Kishor Kumar S. N., LPST, GBLPS Bombrana
Swathi S., LPST, DIET Lab School, Maipady
Shruthi K.R., LPST, DIET Lab School, Maipady
Jayalakshmi P., LPST, ALPS Thottethody
Nishith K.B., LPST, SSB AUPS Aila

**Artists**
Divakaran, Rtd. Drawing Teacher, GHSS Kumbla
Jayaprakash Shetty, Drawing Teacher, SATHS Manjeshwara
Satheesh K., Drawing Teacher, BRC Kumbla
Prakash, Drawing Teacher, BRC Manjeshwara

**Academic Co-ordinator**
Dr. Sahaya Dhas D., Research Officer, SCERT, Thiruvananthapuram

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


| ಕ್ರಮಸಂಖ್ಯೆ | ಘಟಕಗಳು | ಪುಟಗಳು |
|---|---|---|
| 9. | ದುಡಿಯುವ ಕೈಗಳು | 96 - 103 |
| 10. | ಮಿನುಗುವ ತಾರೆಗಳು | 104 - 114 |
| 11. | ಪುಟ್ಟ ಮನೆ | 115 - 121 |
| 12. | ಹಾರಾಡುವ ಹರಿದಾಡುವ | 122 - 129 |
| 13. | ರುಚಿ ರುಚಿ ಹಣ್ಣು | 130 - 146 |
| 14. | ಹಕ್ಕಿಯಂತೆ ಹಾರುವ | 147- 156 |
| 15. | ಫಳಫಳ ಉಡುಪು | 157 - 161 |
| 16. | ಸವಾರಿ ಮಾಡೋಣ | 162 - 167 |
| 17. | ಒಂದಾಗಿ ಬಾಳುವ | 168 - 173 |




# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು
ಅಂಗೀಕರಿಸಿ,
ಶಾಸನವಾಗಿ ವಿಧಿಸಿಕೊಂಡಿದ್ದೇವೆ.

# ಅಕ್ಷರ ಮಾಲೆ

| | | | | | | |
|---|---|---|---|---|---|---|
| ಅ | ಆ | ಇ | ಈ | ಉ | ಊ | ಋ |

| | | | | | | | |
|---|---|---|---|---|---|---|---|
| ಎ | ಏ | ಐ | ಒ | ಓ | ಔ | ಅಂ | ಅಃ |

| | | | | |
|---|---|---|---|---|
| ಕ | ಖ | ಗ | ಘ | ಙ |
| ಚ | ಛ | ಜ | ಝ | ಞ |
| ಟ | ಠ | ಡ | ಢ | ಣ |
| ತ | ಥ | ದ | ಧ | ನ |
| ಪ | ಫ | ಬ | ಭ | ಮ |

| | | | | |
|---|---|---|---|---|
| ಯ | ರ | ಲ | ವ | ಶ |
| ಷ | ಸ | ಹ | ಳ | |

# 9. ದುಡಿಯುವ ಕೈಗಳು



ಮಾದಪುರ ಎಂಬ ಹಳ್ಳಿ. ಅಲ್ಲಿ ವಿಶಾಲವಾದ ಗದ್ದೆಗಳು. ಗದ್ದೆಗಳಲ್ಲಿ ಹಲವರು ಕೆಲಸದಲ್ಲಿ ತೊಡಗಿದ್ದಾರೆ. ಈರಣ್ಣನು ಗದ್ದೆ ಉಳುತ್ತಿದ್ದಾನೆ. ತಿಮ್ಮಜ್ಜ, ಹೇಮಂತ ಮತ್ತು ಗೆಳೆಯರು ಕೆಲಸ ಕಾರ್ಯಗಳನ್ನು ಆಸಕ್ತಿಯಿಂದ ನೋಡುತ್ತಿದ್ದಾರೆ. ಹೇಮಂತನು ಗೆಳೆಯರೊಂದಿಗೆ ಅಲ್ಲಿಗೆ ಬಂದನು.

**ಗದ್ದೆ ಉಳುತ್ತಿರುವುದು ಯಾರು?**

**ಕೆಲಸ ಕಾರ್ಯಗಳನ್ನು ನೋಡುತ್ತಿದ್ದವರು ಯಾರು?**



## ಸಂಭಾಷಣೆ

ಹೇಮಂತ : ಅವರು ಯಾರು?

ತಿಮ್ಮಜ್ಜ : ಅವನು ಈರಣ್ಣ. ಅವನು ಒಬ್ಬ ರೈತ.

ಪಲ್ಲವಿ : ಅವರು ಗದ್ದೆಯಲ್ಲಿ ಏನು ಮಾಡುತ್ತಿದ್ದಾರೆ?

ತಿಮ್ಮಜ್ಜ : ಗದ್ದೆ ಉಳುತ್ತಿದ್ದಾನೆ.

ಹೇಮಂತ : ಗದ್ದೆ ಉಳುವುದು ಯಾಕೆ?

ತಿಮ್ಮಜ್ಜ : ಭತ್ತದ ಕೃಷಿ ಮಾಡಲು.

**ಕೃಷಿಯ ಹಂತಗಳ ಚಿತ್ರಗಳನ್ನು ನೋಡಿ ಅಭಿನಯಿಸಿರಿ.**



"ರೈತನಂತೆ ನಮ್ಮ ಊರಿನಲ್ಲಿ ಬೇರೆ ಬೇರೆ ಕೆಲಸಗಾರರು ಇದ್ದಾರೆ." ತಿಮ್ಮಜ್ಜ ಹೇಳಿದರು. ಅವರು ಯಾರೆಂದು ನೋಡೋಣವೆ?



**ಹಾಡುವ**

ಹೊಲವನುತ್ತು ಬೀಜ ಬಿತ್ತಿ
ದವಸ ಧಾನ್ಯ ಬೆಳೆಸಿ ಕೊಡುವೆ
ನಾನು ಯಾರು?



ಕಬ್ಬಿಣಕ್ಕೆ ಕಾವು ಕೊಟ್ಟು
ಹಾರೆ ಕತ್ತಿ ಮಾಡಿ ಕೊಡುವೆ
ನಾನು ಯಾರು?

ತಿಗರಿ ಮೇಲೆ ಮಣ್ಣನಿಟ್ಟು
ಮಡಕೆ ಕುಡಿಕೆ ಮಾಡಿಕೊಡುವೆ
ನಾನು ಯಾರು?





ಚಿನ್ನದಿಂದ ಕಿವಿಗೆ ಓಲೆ
ಕೈಗೆ ಬಳೆಯ ಮಾಡಿ ಕೊಡುವೆ
ನಾನು ಯಾರು?

ಮರವ ಕೆತ್ತಿ ಮೇಜು ಕುರ್ಚಿ
ಬೆಂಚು ಮಂಚ ಮಾಡಿ ಕೊಡುವೆ
ನಾನು ಯಾರು?






ಹೇಮಂತನು ಅಪ್ಪನ ಜೊತೆಗೆ ಅಂಗಡಿಗೆ ಹೋದನು. ಅಲ್ಲಿ ತುಂಬಾ ಮರದ ಉಪಕರಣಗಳು ಇದ್ದುವು. ಅಲ್ಲಿರುವ ಕಿಟಿಕಿ, ಬಾಗಿಲು, ಮಂಚ, ಮೇಜು, ಕುರ್ಚಿ, ಸೋಫಾ, ಟೀಪಾಯಿ ಆರಾಮ ಕುರ್ಚಿಗಳನ್ನು ನೋಡಿ ಅವನಿಗೆ ಆಶ್ಚರ್ಯವಾಯಿತು.

ಅಬ್ಬಬ್ಬಾ... ಎಷ್ಟೊಂದು ಉಪಕರಣಗಳು!



ಚಿತ್ರದಲ್ಲಿರುವ ಮರದ ಉಪಕರಣಗಳನ್ನು ಪಟ್ಟಿ ಮಾಡುವ.

# ಗುರುತಿಸಿ ಹೇಳಿರಿ... ಬರೆಯಿರಿ...





..................................

..................................





..................................

..............................







..................................

....................

..................................





..................................

..................................

| | | | | |
|---|---|---|---|---|
| ಕೋಲು | ಹಾರೆ | ಪಿಕ್ಕಾಸು | ಊದುಕುಲುಮೆ | |
| ಗೀಸುಳಿ | ಸುತ್ತಿಗೆ | ನೇಗಿಲು | ಗರಗಸ | ತಿಗರಿ |

# ಯಾರಿಗೆ ಯಾವುದು?

ಕೋಲು



ತಿಗರಿ



ಕುಲುಮೆ

ಗರಗಸ

ಗೀಸುಳಿ

ಸುತ್ತಿಗೆ



ನೇಗಿಲು

ಹೊಲಿಗೆಯಂತ್ರ



ಅಳತೆ ಟೇಪು

ಹಾರೆ

ಪಿಕ್ಕಾಸು



# ಇವರು ನಮ್ಮ ಸಹಾಯಕರು



ಪೇಟೆಯಲ್ಲಿ ಹೇಮಂತನು ರೀಟಾಳನ್ನು ಕಂಡನು.

ಹೇಮಂತ : ರೀಟಾ, ಎಲ್ಲಿಗೆ ಹೋಗುತ್ತಿರುವೆ?

ರೀಟಾ : ಅಕ್ಷಯ ಕೇಂದ್ರಕ್ಕೆ.

ಹೇಮಂತ : ಯಾಕೆ?

ರೀಟಾ : ನನ್ನ ಆಧಾರ್ ಕಾರ್ಡಿನಲ್ಲಿ ಹೆಸರು ಸರಿಪಡಿಸಬೇಕಾಗಿದೆ.

ಹೇಮಂತ : ಸರಿ, ಮತ್ತೆ ಭೇಟಿಯಾಗೋಣ.








ಇವರು ಹೇಗೆ ಸಹಾಯ ಮಾಡುತ್ತಾರೆ?





## ವಾಕ್ಯವನ್ನು ಸರಿಪಡಿಸಿ ಬರೆಯಿರಿ

ಉಳುತ್ತಾನೆ ರೈತ ಗದ್ದೆಯನ್ನು

ರೀಟ ಜೊತೆಗೆ ಅಪ್ಪನ ಹೋದಳು

ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದರು ರೈತರು

## ಟಿಪ್ಪಣಿ ಬರೆಯಿರಿ



# 10. ಮಿನುಗುವ ತಾರೆಗಳು

ಹನೀಫನ ಶಾಲೆಯಲ್ಲಿ ವಿಜ್ಞಾನ ಮೇಳ. ಹನೀಫನು ಅಪ್ಪನ ಸಹಾಯದಿಂದ ಆಕಾಶಕಾಯಗಳ ಮಾದರಿಯನ್ನು ನಿರ್ಮಿಸುತ್ತಿದ್ದನು.ಇದನ್ನು ನೋಡುತಿದ್ದ ತಂಗಿ ಫಿದಾಳಿಗೆ ಹಲವಾರು ಸಂಶಯಗಳು ಮೂಡಿದುವು. ಹನೀಫನು ತಂಗಿಯ ಕೈಹಿಡಿದುಕೊಂಡು ಅಂಗಳಕ್ಕೆ ಇಳಿದನು.





ಚಂದ ಮಾಮ ಬಾರೋ ಬಾರೋ
ಕಬ್ಬಿನ ಕೋಲು ಊರುತ ಬಾರೋ
ಬಾಳೆಹಣ್ಣು ತಗೊಂಡು ಬಾರೋ
ಬೆಳ್ಳಿಯ ಬಟ್ಟಲು ಹಾಲು ತಾರೋ
ಮುದ್ದು ಪುಟಾಣಿಯ ಹತ್ತಿರ ಬಾರೋ
ಬಾರೋ ಬಾರೋ ಓಡಿ ಬಾರೋ

## ಆಕಾಶ ವೀಕ್ಷಣೆ

ನೀವು ರಾತ್ರಿ ಆಕಾಶ ವೀಕ್ಷಣೆ ಮಾಡಿ, ಕಂಡ ದೃಶ್ಯದ ಚಿತ್ರ ಬಿಡಿಸಿರಿ.



## ಓದುವ

ಬೆಳಗಾಯಿತು. ಫಿದಾಳು ಅಂಗಳಕ್ಕಿಳಿದು ಆಕಾಶ ನೋಡಿದಳು. "ಅಣ್ಣಾ ರಾತ್ರಿ ಕಂಡ ಚಂದ್ರ ಮತ್ತು ನಕ್ಷತ್ರಗಳು ಈಗ ಕಾಣುತ್ತಿಲ್ಲವಲ್ಲ." ಅವಳು ಆಶ್ಚರ್ಯದಿಂದ ಕೇಳಿದಳು. "ಫಿದಾ, ಈಗ ಹಗಲು ಹೊತ್ತು. ಹಗಲು ಹೊತ್ತಿನಲ್ಲಿ ಆಕಾಶದಲ್ಲಿ ಸೂರ್ಯ ಮಾತ್ರ ಕಾಣಿಸುತ್ತಾನೆ" ಹನೀಫ ಹೇಳಿದನು.



**ಹಗಲು ಹೊತ್ತಿನಲ್ಲಿ ಆಕಾಶ ಹೇಗಿರುತ್ತದೆ...? ಚಿತ್ರ ಬಿಡಿಸಿರಿ.**

**ಪದ ಪರಿಚಯ**

ಸೂರ್ಯ - ಆದಿತ್ಯ

ಆಕಾಶ - ಗಗನ

ಚಂದ್ರ - ಶಶಿ

ನಕ್ಷತ್ರ - ತಾರೆ

ಮೋಡ - ಮುಗಿಲು

**ಗೆಳೆಯರೇ..... ನನ್ನ ಕುರಿತು ಬರೆಯುವಿರಲ್ಲವೆ..?**



ಇವನು ಸೂರ್ಯ.

ಹಗಲು ಹೊತ್ತಿನಲ್ಲಿ ಕಾಣುತ್ತಾನೆ.

ನಮಗೆ ಬೆಳಕು ನೀಡುತ್ತಾನೆ.







## ಪ್ರಶ್ನೆಗಳಿಗೆ ಉತ್ತರಿಸಿರಿ

- ಸೂರ್ಯ ಆಕಾಶದಲ್ಲಿ ಯಾವಾಗ ಕಾಣಿಸುತ್ತಾನೆ?
- ರಾತ್ರಿ ಹೊತ್ತಿನಲ್ಲಿ ಆಕಾಶದಲ್ಲಿ ಯಾರನ್ನು ಕಾಣುತ್ತೇವೆ?
- ಮಳೆ ಬರುವ ಮೊದಲು ಮೋಡದ ಬಣ್ಣವೇನು?
- ಹಗಲು ಹೊತ್ತಿನಲ್ಲಿ ಬೆಳಕು ಕೊಡುವವನು ಯಾರು?

## ವಾಕ್ಯ ಓದಿರಿ. ಅಡಿಗೆರೆ ಎಳೆದ ಪದಗಳನ್ನು ಕೋಣೆಯಲ್ಲಿ ಬರೆಯಿರಿ.

| | |
|---|---|
| ನಕ್ಷತ್ರ **ಫಳಫಳನೆ** ಹೊಳೆಯಿತು. | ಫಳಫಳನೆ |
| ಬೆಂಕಿ **ಧಗಧಗನೆ** ಉರಿಯಿತು. | |
| ಪಟಾಕಿ **ಢಂಢಂ** ಸಿಡಿಯಿತು. | |
| ಡೋಲು **ಢುಂ ಢುಂ** ಬಡಿಯಿತು. | |
| ಹಾವು **ಭುಸ್ ಭುಸ್** ಎಂದಿತು. | |
| ದೀಪ **ಝುಗಝುಗನೆ** ಬೆಳಗಿತು. | |
| ಮರದ ಗೆಲ್ಲು **ಛಟಛಟನೆ** ಮುರಿಯಿತು. | |

ಸಂಜೆ ಹೊತ್ತಿನಲ್ಲಿ ಮಕ್ಕಳು ಅಪ್ಪ ಅಮ್ಮನ ಜೊತೆಗೆ ಕಡಲ ತೀರಕ್ಕೆ ಹೋದರು. "ಆಹಾ!.... ಸಂಜೆ ಹೊತ್ತು ಕಡಲ ತೀರದಲ್ಲಿ ನಿಂತು ಸೂರ್ಯನನ್ನು ನೋಡುವುದು ಅದೆಷ್ಟು ಖುಷಿ ಅಲ್ಲವೇ?" ಅಪ್ಪನೊಡನೆ ಹೇಳಿದರು.

## ಚಿತ್ರ ಬಿಡಿಸುವ - ಬಣ್ಣ ಹಚ್ಚುವ

ಸಂಜೆ ಹೊತ್ತಿನಲ್ಲಿ ಮಕ್ಕಳು ಕಂಡ ಕಡಲ ತೀರದ ಚಿತ್ರ ಹೇಗಿರಬಹುದು?

ಮಕ್ಕಳು ಕಡಲ ತೀರದಲ್ಲಿ ಕಂಡದ್ದೇನು? ಬರೆಯಿರಿ.











ಮಕ್ಕಳು ಆಟ ಆಡುತ್ತಿದ್ದಂತೆ ಮೀನು ತುಂಬಿದ ದೋಣಿಯೊಂದು ಕಡಲ ತೀರಕ್ಕೆ ಬಂದಿತು.

ಹನೀಫ : ಅಬ್ಬಾ! ಇಷ್ಟೊಂದು ಮೀನುಗಳು ಎಲ್ಲಿಂದ ಸಿಗುತ್ತವೆ?

ಅಮ್ಮ : ..........................................................................................

ಫಿದಾ : ಅವುಗಳನ್ನು ಹೇಗೆ ಹಿಡಿಯುತ್ತಾರೆ?

ಅಮ್ಮ : ..........................................................................................

ಹನೀಫ : ..........................................................................................

ಅಮ್ಮ : ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾರೆ.





# ಕಡಲಿನ ಒಡಲು

ಕಡಲನು ನೋಡಲು ಹೋಗೋಣ
ಮರಳಿನ ಮನೆಯನು ಮಾಡೋಣ
ತೇಲುವ ದೋಣಿಯ ನೋಡೋಣ
ತೀರದಿ ಚಿಪ್ಪನು ಹೆಕ್ಕೋಣ
ಕಡಲಾಗಿದೆ ನೀರಿನ ಒಡಲು
ಅಲೆಗಳ ಅಬ್ಬರ ಮುಟ್ಟಿದೆ ಮುಗಿಲು
ಕಡಲಿನ ನೋಟವು ಬಲು ಸೊಗಸು
ನೋಡುತ ನಿಂತರೆ ನಲಿವುದು ಮನಸು
ಸುಯ್ಯನೆ ಬೀಸುವ ತಣ್ಣನೆ ಗಾಳಿ
ಮಕ್ಕಳ ನಗುವಿನ ಕೇಕೆಯ ಕೇಳಿ
ಬೆಸ್ತರು ಹಿಡಿದಿಹ ಮೀನಿನ ರಾಶಿ
ಕಡಲನು ನೋಡಲು ಖುಷಿಯೋ ಖುಷಿ

## ಹೊಂದಿಸಿ ಬರೆಯುವ

| | |
|---|---|
| ತಣ್ಣನೆ | ಅಬ್ಬರ |
| ತೇಲುವ | ನೋಟ |
| ಮೀನಿನ | ಗಾಳಿ |
| ಅಲೆಗಳ | ದೋಣಿ |
| ಕಡಲಿನ | ರಾಶಿ |

| |
|---|
| |
| |
| |
| |
| |

## ಮುಂದುವರಿಸಿ ಬರೆಯುವ

ಕಡಲು ನೋಡಲು ಸುಂದರವಾಗಿದೆ. ಕಡಲ ತೀರದಲ್ಲಿ ತಂಪಾದ ಗಾಳಿ ಬೀಸುತ್ತದೆ. ಕಡಲಿನ ನೀರು ಉಪ್ಪುನೀರು. ..............................................

..............................................................................................................

..............................................................................................................

..............................................................................................................

..............................................................................................................



# 11. ಪುಟ್ಟಮನೆ

ಮೇರಿ ಅಪ್ಪನ ಜೊತೆಯಲ್ಲಿ ಹೊಸ ಮನೆ ಕಟ್ಟುವಲ್ಲಿಗೆ ಬಂದಳು. ಅಲ್ಲಿ ಕಿಟ್ಟು ಮಾಮ ಬಾಗಿಲಿನ ಕೆಲಸ ಮಾಡುತ್ತಿದ್ದರು. ಅಷ್ಟರಲ್ಲಿ ಅಲ್ಲಿಗೆ ಹೊಯಿಗೆ ಲಾರಿ ಬಂದಿತು. "ಅಪ್ಪ, ಇನ್ನು ಮಾಡಿನ ಕೆಲಸ ಮುಗಿದರೆ ನಿರ್ಮಾಣ ಪೂರ್ತಿಯಾಗುವುದಲ್ಲವೇ?" ಮೇರಿ ಕೇಳಿದಳು. "ಇಲ್ಲ ಮಗೂ, ಇನ್ನೂ ಹಲವಾರು ಕೆಲಸಗಳು ಬಾಕಿ ಇವೆ" ಅಪ್ಪ ಹೇಳಿದರು.

## ಮನೆ ನಿರ್ಮಾಣದ ಹಂತಗಳು ಯಾವುವೆಲ್ಲಾ?







## ಮನೆ ನಿರ್ಮಾಣದ ಹಂತಗಳನ್ನು ಕ್ರಮೀಕರಿಸಿರಿ.

- [ ] ಪೈಂಟಿಂಗ್
- [ ] ಅಡಿಪಾಯ ನಿರ್ಮಾಣ
- [ ] ಬಾಗಿಲು ಜೋಡಿಸುವುದು
- [ ] ಮಾಡು ಮಾಡುವುದು
- [ ] ಸಾರಣೆ ಮಾಡುವುದು
- [ ] ಕಿಟಿಕಿ ಇಡುವುದು
- [ ] ಗೋಡೆ ಕಟ್ಟುವುದು

## ಮನೆಯನ್ನು ಪೂರ್ತಿಗೊಳಿಸಿ ಭಾಗಗಳನ್ನು ಹೆಸರಿಸಿರಿ.



## ಬರೆಯುವ

- ಮನೆಗೆ ಬಾಗಿಲು ಇದೆ.
- 
- 
- 
- 



ಮೇರಿಯ ಮನೆ ಪೂರ್ತಿಯಾಯಿತು. ಅಂದದ ಹೊಸ ಮನೆ. ವಿಶಾಲವಾದ ಚಾವಡಿ. ಚಾವಡಿಯ ಎರಡೂ ಬದಿಗಳಲ್ಲಿ ಮಲಗುವ ಕೋಣೆಗಳಿವೆ. ಅಡುಗೆ ಕೋಣೆಯಲ್ಲಿ ತುಂಬಾ ಸೌಕರ್ಯವಿದೆ. ಬಚ್ಚಲುಕೋಣೆ ಮನೆಯ ಒಳಗೆಯೇ ಇದೆ. ಅತಿಥಿಕೋಣೆಯಲ್ಲಿ ಪೀಠೋಪಕರಣಗಳನ್ನು ಇರಿಸಿದ್ದಾರೆ. ಮನೆಯ ಎದುರು ದೊಡ್ಡ ಅಂಗಳವಿದೆ. ಅಂಗಳದ ಮುಂದೆ ಸುಂದರವಾದ ಹೂದೋಟವಿದೆ. "ಆಹಾ! ಸುಂದರವಾದ ಮನೆ." ಮನೆ ಒಕ್ಕಲಿಗೆ ಬಂದವರು ಹೊಗಳಿದರು.

**ಪಾಠದಲ್ಲಿ ಬಂದ ಕೋಣೆಗಳನ್ನು ಬರೆಯಿರಿ.**

- 
- 
- 
- 

## ಮನೆಯ ಸದಸ್ಯರು



**ನಿಮ್ಮ ಮನೆಯಲ್ಲಿ ಯಾರೆಲ್ಲ ಇದ್ದಾರೆ? ಹೇಳಿರಿ.**

### ನಮ್ಮ ಮನೆಯ ಸದಸ್ಯರು

## ತರ ತರದ ಮನೆಗಳು



ಹುಲ್ಲಿನ ಮನೆ



ಶೀಟು ಹಾಕಿದ ಮನೆ



ತಾರಸಿ ಮನೆ



ಹಂಚಿನ ಮನೆ



ಸೋಗೆಯ ಮನೆ



ಗುಡಾರ

## ನಿಮ್ಮ ಮನೆಯಲ್ಲಿ ಯಾವೆಲ್ಲಾ ಕೋಣೆಗಳಿವೆ?

-
-
-
-
-



## ಹಾಡುವ, ಸಾಲು ಸೇರಿಸುವ

ಮನೆ ಮನೆ ನನ್ನ ಮನೆ
ಅಂದವಾದ ನನ್ನ ಮನೆ
ಅಪ್ಪ ಅಮ್ಮ ಇರುವ ಮನೆ
ಅಜ್ಜ....................................
ಚಂದವಾದ ನನ್ನ ಮನೆ

ಮನೆ ಮನೆ ನನ್ನ ಮನೆ
ಗೋಡೆ ಮಾಡು ಇರುವ ಮನೆ
................................................
................................................
ಚಂದವಾದ ನನ್ನ ಮನೆ

ಮನೆ ಮನೆ ನನ್ನ ಮನೆ
ಅಡುಗೆಕೋಣೆ ಇರುವ ಮನೆ
................................................
................................................
ಚಂದವಾದ ನನ್ನ ಮನೆ

# 12. ಹಾರಾಡುವ ಹರಿದಾಡುವ

## ಹಾಡುವ

ಇರುವೆಯ ದಿಬ್ಬಣ ನೋಡಲ್ಲಿ
ಗೋಡೆಯ ಕೆಳಗಿನ ನೆಲದಲ್ಲಿ
ಸಾಗುತಲಿಹುದು ಸಾಲಾಗಿ
ಮುಂದಕೆ ಮುಂದಕೆ ನೇರಾಗಿ
ಒಬ್ಬರನೊಬ್ಬರು ನೂಕದೆಯೆ
ನುಗ್ಗುತ ಗಲಭೆಯ ಮಾಡದೆಯೆ
ಇರುವೆಗಳಂದದಿ ಸಾಗುವುವು
ಚಿಕ್ಕ ಜೀವಿಗಳು ಇರುವೆಗಳು
ಐಕ್ಯದ ಪಾಠವ ಕಲಿಸುವುವು



ಮಳೆ ಜೋರಾಗಿ ಸುರಿಯತೊಡಗಿತು. ಮಳೆಯ ನೀರು ಹರಿದು ಇರುವೆಯ ಗೂಡಿಗೆ ನುಗ್ಗಿತು. ಮಳೆನೀರಿಗೆ ಗೂಡು ಕೊಚ್ಚಿ ಹೋಯಿತು. ಗೂಡಿನಲ್ಲಿದ್ದ ಆಹಾರವು ನೀರು ಪಾಲಾಯಿತು. ಇನ್ನೇನು ಮಾಡಲಿ? ಇರುವೆ ಬೇಸರದಿಂದ ಅಳತೊಡಗಿತು. ಮಳೆ ಕಡಿಮೆ ಆಯಿತು. ಇಲಿ ನಡುಗುತ್ತಾ ಬಿಲದಿಂದ ಹೊರಗೆ ಇಳಿಯಿತು.

ಇಲಿ : ಯಾಕೆ ಅಳುತ್ತಿರುವೆ?
ಏನಾಯಿತು?

ಇರುವೆ : ...........................................................

ಇಲಿ : .........................................................

ಇರುವೆ : ...........................................................

ಇಲಿ : .........................................................

ಕಾಗೆ : ಬೇಸರಪಡಬೇಡಿ. ನಾನು ಮತ್ತು ನನ್ನ ಗೆಳೆಯರು
ಸೇರಿ ನಿಮಗೆ ಸಹಾಯ ಮಾಡುತ್ತೇವೆ.



## ಗೆಳೆಯರು ಯಾರೆಲ್ಲಾ? ಕಂಡುಹಿಡಿದು ಬರೆಯಿರಿ.

ನೊ ದ್ದ ಣ ಅ ತಿ

ಜಿ ಗೆ ಹಾ ಚೇ ನ ಣೆ

ಲು ಳೆ ರ ಜೇ ಳು ಟೆ

ಟ್ಟೆ ವು ಓ ಡ ಚಿ

## ಚಿತ್ರಗಳಿಗೆ ಬಣ್ಣ ಹಚ್ಚಿರಿ.









## ಹೇಗೆ ಬಂದರು?



## ನನ್ನ ಕುರಿತು ಹೇಳಲೇ.....

### ಚಿಟ್ಟೆ



ನಾನು ಹೂವಿನಿಂದ ಹೂವಿಗೆ ಹಾರುತ್ತೇನೆ.
ಹೂವಿನಿಂದ ಜೇನು ಹೀರುತ್ತೇನೆ.
ನನಗೆ ಬೇರೆ ಬೇರೆ ಬಣ್ಣಗಳಿವೆ.



### ಜೇಡ

ನನಗೆ ಎಂಟು ಕಾಲುಗಳಿವೆ.
ಚಿಕ್ಕ ಜೀವಿಗಳೇ ನನ್ನ ಆಹಾರ.
ನಾನು ಬಲೆ ಹೆಣೆಯುತ್ತೇನೆ.

### ಇರುವೆ





### ಹಾವು



ಚಿನ್ನಾರಿ ಚಿಟ್ಟೆ ಆಹಾರ ಹುಡುಕುತ್ತಾ ಹೊರಟಿತು.
'ಕರಡಿಯಣ್ಣನ ಹೂದೋಟದಲ್ಲಿ ತುಂಬಾ ಹೂಗಳು
ಅರಳಿರಬಹುದು. ಅಲ್ಲಿ ಹೋದರೆ ಹೊಟ್ಟೆ ತುಂಬಾ ಜೇನು
ಸಿಗಬಹುದು' ಎಂದು ಯೋಚಿಸುತ್ತಾ ರೆಕ್ಕೆ ಬಿಚ್ಚಿ ಹಾರತೊಡಗಿತು.
ಹೂದೋಟದ ಬದಿಯಲ್ಲಿ ಒಂದು ದೊಡ್ಡ ಮಾವಿನ ಮರವಿತ್ತು.
ಆ ಮರದಲ್ಲಿ ಭೀಮು ಜೇಡ ಬಲೆಯನ್ನು
ಕಟ್ಟಿ ಹೊಂಚು ಹಾಕುತ್ತಿದ್ದನು.
ಚಿನ್ನಾರಿಯು ಇದನ್ನು
ಗಮನಿಸಲೇ ಇಲ್ಲ.
ಮುಂದೇನಾಯಿತು?

















ತರತರದ ಚಿಟ್ಟೆಗಳ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.

ಕಾಗದದಿಂದ ಚಿಟ್ಟೆಯನ್ನು ನಿರ್ಮಿಸಿರಿ.

# 13. ರುಚಿ ರುಚಿ ಹಣ್ಣು

## ಕಥೆ ಓದುವ

ಕಾಗೆಗೆ ತುಂಬಾ ಹಸಿವಾಗಿತ್ತು. ಅದು ಆಹಾರ ಹುಡುಕುತ್ತಾ ಪೇಟೆಯಲ್ಲಿ ಸುತ್ತಾಡುತ್ತಾ ಇತ್ತು.



ಅಲ್ಲೊಂದು ಹಣ್ಣಿನ ಅಂಗಡಿಯನ್ನು

ನೋಡಿತು.





ಅಲ್ಲಿ ಪಪ್ಪಾಯಿ ಹಣ್ಣುಗಳ

ತುಂಡುಗಳನ್ನು ಇರಿಸಿದ್ದರು.

ಕಾಗೆ ಅತ್ತಿತ್ತ ನೋಡಿತು.

ಯಾರೂ ಇಲ್ಲ.



ಒಂದು ಪಪ್ಪಾಯಿ ತುಂಡನ್ನು ಕಚ್ಚಿಕೊಂಡಿತು.
ಅದನ್ನು ಎತ್ತಿಕೊಂಡು ಹಾರಿಯೇ ಬಿಟ್ಟಿತು.
ಹಾರಿ ಹಾರಿ ದೂರದ ಕಾಡಿಗೆ ತಲುಪಿತು.



ಕಾಡಿನಲ್ಲಿ ಒಂದು ಮರದ
ಗೆಲ್ಲಿನ ಮೇಲೆ ಕುಳಿತಿತು.
ಪಪ್ಪಾಯಿ ತುಂಡನ್ನು
ತಿನ್ನತೊಡಗಿತು.
ಸ್ವಲ್ಪ ತಿಂದಾಗ ಕಾಗೆಯ
ಹೊಟ್ಟೆ ತುಂಬಿತು.



ಉಳಿದ ಹಣ್ಣು ಕಾಗೆಯ ಕೊಕ್ಕಿನಿಂದ
ಕೆಳಗೆ ಬಿತ್ತು. ಬಿದ್ದ ಹಣ್ಣಿನ ತುಂಡನ್ನು
ಅಲ್ಲಿಯೇ ಬಿಟ್ಟು ಕಾಗೆ ಹಾರಿ ಹೋಯಿತು.

ದಿನಗಳು ಕಳೆದುವು. ಮಳೆ ಬಂತು.
ಪಪ್ಪಾಯಿ ಬೀಜ ಮೊಳೆತು ಗಿಡವಾಯಿತು.

ಒಂದು ದಿನ ಕಾಡಿನಲ್ಲಿ ತಿರುಗಾಡುತ್ತಿದ್ದ ಗೆಳೆಯರಾದ ನರಿ ಮತ್ತು ಮೊಲ ಹೊಸ ಗಿಡವೊಂದನ್ನು ಕಂಡರು.




ಇಬ್ಬರೂ ಸೇರಿ ಅದರ ಬುಡಕ್ಕೆ ಮಣ್ಣು ಹಾಕಿದರು. ದಿನ ನಿತ್ಯ ನೀರು ಎರೆದರು. ಗೊಬ್ಬರ ಹಾಕಿದರು. ಗಿಡ ಬೆಳೆಯಿತು. ಹೂ ಬಿಟ್ಟಿತು. ನರಿ ಮತ್ತು ಮೊಲಕ್ಕೆ ಸಂತೋಷವಾಯಿತು.





"ನರಿಯಣ್ಣ, ಅದೋ ನೋಡು,
ಗಿಡದಲ್ಲಿ ಚಿಕ್ಕ ಕಾಯಿಗಳಾಗಿವೆ"
ಮೊಲ ಹೇಳಿತು.
ಅವರು ಕಾಯಿಗಳು ಹಣ್ಣಾಗಲು
ಕಾಯುತ್ತಿದ್ದರು.

ಒಂದು ದಿನ ಅವರು ನಡೆದಾಡುತ್ತಾ ಗಿಡದ
ಬಳಿಗೆ ಬಂದರು. ಗಿಡದ ಬುಡದಲ್ಲಿ ಒಂದು ಹಣ್ಣು
ಬಿದ್ದಿರುವುದನ್ನು ಕಂಡರು. ನರಿಯು ಅದನ್ನು ಹೆಕ್ಕಿತು.
ಅಲ್ಲಿಗೆ ಕಾಗೆಯೂ ಹಾರಿ ಬಂತು. "ಇದನ್ನು ನಾವು ಹಂಚಿ
ತಿನ್ನೋಣ." ನರಿಯು ಹೇಳಿತು.



ಅಷ್ಟರಲ್ಲಿ ಅಲ್ಲಿಗೆ ಗಿಳಿಯೂ ಬಂದಿತು.

ನರಿ ಗಿಳಿಗೂ ಹಣ್ಣನ್ನು ಕೊಟ್ಟಿತು.

ಎಲ್ಲರೂ ಹಣ್ಣನ್ನು ಹಂಚಿ ತಿಂದರು.

"ಆಹಾ... ಎಷ್ಟು ಸಿಹಿಯಾದ ಹಣ್ಣು" ಗಿಳಿ ಹೇಳಿತು.

"ಇದು ನಾವು ಬೆಳೆಸಿದ ಗಿಡದಲ್ಲಿ ಆದ ಹಣ್ಣು" ಮೊಲ ಹೇಳಿತು. "ಊರಿನಲ್ಲಿ ಇನ್ನೂ ಹಲವು ತರದ ರುಚಿ ರುಚಿಯಾದ ಹಣ್ಣುಗಳಿವೆ" ಕಾಗೆ ಹೇಳಿತು.



# ಬಣ್ಣ ಹಚ್ಚುವ













# ಚಿತ್ರ ಬಿಡಿಸಿ ಬಣ್ಣ ಹಚ್ಚಿರಿ

ಸೇಬು

## ಪಟ್ಟಿ ಮಾಡುವ

ನಮ್ಮ ಊರಿನ ಹಣ್ಣುಗಳು ಯಾವುವು? ಬರೆಯಿರಿ.





ಪೇರಳೆ ಹಣ್ಣಿನೊಳಗೆ
ಅಡಗಿರುವುದು ಯಾರು?

**ಹಲಸಿನ ಹಣ್ಣಿನ ಕುರಿತು ಬರೆಯಿರಿ.**




**ನಿಮಗೆ ಇಷ್ಟವಿರುವ ಹಣ್ಣಿನ ಕುರಿತು ಬರೆಯಿರಿ.**

ಹಣ್ಣುಗಳ ಹೆಸರು ಬರೆಯಿರಿ.









## ಸಾಲು ಸೇರಿಸುವ

ಹಣ್ಣು ಹಣ್ಣು ಮಾವಿನ ಹಣ್ಣು
ಹಳದಿ ಬಣ್ಣದ ಮಾವಿನ ಹಣ್ಣು
ಮರದಲಿ ತೂಗುವ ಮಾವಿನ ಹಣ್ಣು





ಹಣ್ಣು ಹಣ್ಣು ದ್ರಾಕ್ಷೆ ಹಣ್ಣು

..................................................

..................................................

ಹಣ್ಣು ಹಣ್ಣು ಬಾಳೆಹಣ್ಣು

..................................................

..................................................



..................................................

..................................................

..................................................

ನಾವೆಲ್ಲರು ಸೇರಿ ಹಣ್ಣಿನ ತೋಟ ಮಾಡೋಣ. ಎಲ್ಲರು ಬೇರೆ ಬೇರೆ ಕಡೆಗಳಿಂದ ಹಣ್ಣಿನ ಬೀಜಗಳನ್ನು ಸಂಗ್ರಹಿಸಿ ತಂದರು. ಮಣ್ಣು ಅಗೆದರು. ಬೀಜ ಬಿತ್ತಿದರು. ನೀರು ಎರೆದರು. ಕೆಲವು ದಿನಗಳಲ್ಲಿ ಬೀಜಗಳು ಮೊಳೆತವು. ಗಿಡಗಳು ಹುಲುಸಾಗಿ ಬೆಳೆದುವು. ತೋಟ ನೋಡಿ ನರಿಯಣ್ಣನಿಗೆ ಸಂತೋಷವಾಯಿತು.

"ಮಣ್ಣು ಚೆನ್ನಾಗಿದ್ದರೆ ಬೆಳೆಯು ಚೆನ್ನಾಗಿರುವುದು." ನರಿಯಣ್ಣ ಹೇಳಿತು.



# ಮಣ್ಣು ಯಾಕೆ ಬೇಕು?





- ಮಡಕೆ ತಯಾರಿಸಲು
- 
- 

- 
- 
- 





**ತಯಾರಿಸುವ**

ಮಣ್ಣಿನಿಂದ ಅಂದದ ಆಟಿಕೆ ತಯಾರಿಸೋಣ.

# ಮಣ್ಣಿನ ಹೆಂಟೆ ಮತ್ತು ತರಗೆಲೆ



ಮಣ್ಣಿನ ಹೆಂಟೆ ಮತ್ತು ತರಗೆಲೆ ಗೆಳೆಯರಾಗಿದ್ದರು. ಒಂದು ದಿನ ಇಬ್ಬರು ಆಟವಾಡಲು ಹೊರಟರು. ಅಷ್ಟರಲ್ಲಿ ಜೋರಾಗಿ ಗಾಳಿ ಬೀಸತೊಡಗಿತು. ಗಾಳಿಗೆ ಹಾರಿ ಹೋಗುವೆನೆಂದು ತರಗೆಲೆಗೆ ಹೆದರಿಕೆಯಾಯಿತು.

ಆಗ ಮಣ್ಣಿನ ಹೆಂಟೆಗೊಂದು ಉಪಾಯ ಹೊಳೆಯಿತು. ಅದು ಓಡಿ ಬಂದು ತರಗೆಲೆಯ ಮೇಲೆ ನಿಂತಿತು. "ಅಬ್ಬಾ! ಕಾಪಾಡಿದೆ..." ತರಗೆಲೆ ಹೇಳಿತು. ಗಾಳಿ ನಿಂತಿತು. ಅವರು ಆಟ ಆಡತೊಡಗಿದರು. ಫಕ್ಕನೆ ಆಕಾಶ ಕಪ್ಪಾಯಿತು.



ಮಳೆ ಹನಿಯತೊಡಗಿತು. "ನಾನೇನು ಮಾಡಲಿ?" ಮಣ್ಣಿನ ಹೆಂಟೆಗೆ ಬೇಸರವಾಯಿತು. "ಹೆದರಬೇಡ, ನಾನು ನಿನ್ನನ್ನು ರಕ್ಷಿಸುತ್ತೇನೆ" ಎನ್ನುತ್ತಾ ಮಣ್ಣಿನಹೆಂಟೆಯ ಮೇಲೆ ತರಗೆಲೆ ಕುಳಿತಿತು. ಮಳೆ ನಿಂತಿತು.



ಅವರು ಮನೆಯ ಕಡೆಗೆ ಹೊರಟರು. ಅಷ್ಟರಲ್ಲಿ ಜೋರಾಗಿ ಗಾಳಿ ಮಳೆ ಬಂತು. ಇಬ್ಬರಿಗೂ ಭಯವಾಯಿತು. "ಏನು ಮಾಡುವುದು? ಎಲ್ಲಿಗೆ ಹೋಗುವುದು?" ಅವರು ಸುತ್ತಲೂ ನೋಡಿದರು.





"ಬನ್ನಿ ಬನ್ನಿ ಇಲ್ಲಿಗೆ ಬನ್ನಿ" ಮುದಿ ಮರ ಕರೆಯಿತು. "ನನ್ನ ಪೊಟರೆಯಲ್ಲಿ ಸೇರಿಕೊಳ್ಳಿ" ಎಂದಿತು. ಮಣ್ಣಿನ ಹೆಂಟೆ ಹಾಗೂ ತರಗೆಲೆಗೆ ಬಹಳ ಸಂತೋಷವಾಯಿತು. ಇಬ್ಬರೂ ಗಾಳಿಮಳೆಯಿಂದ ರಕ್ಷಣೆ ಪಡೆದರು. ತರಗೆಲೆಯು ಮಣ್ಣಿನ ಹೆಂಟೆಯನ್ನು ತಬ್ಬಿ ಹಿಡಿಯಿತು.

### ಕಥೆಯ ಆಶಯಗಳನ್ನು ಕ್ರಮೀಕರಿಸಿ ಬರೆಯಿರಿ.

- ಜೋರಾಗಿ ಗಾಳಿ ಬೀಸತೊಡಗಿತು. ☐
- ಮಣ್ಣಿನ ಹೆಂಟೆಯು ತರಗೆಲೆಯ ಮೇಲೆ ನಿಂತಿತು. ☐
- ಜೋರಾಗಿ ಗಾಳಿ ಮಳೆ ಬಂತು. ☐
- ತರಗೆಲೆ ಮಣ್ಣಿನ ಹೆಂಟೆಯ ಮೇಲೆ ಕುಳಿತಿತು. ☐
- ಮಣ್ಣಿನ ಹೆಂಟೆ ಮತ್ತು ತರಗೆಲೆ ಗೆಳೆಯರಾಗಿದ್ದರು. ☐
- ಮಳೆ ಹನಿಯತೊಡಗಿತು. ☐
- ಮರದ ಪೊಟರೆಯಲ್ಲಿ ರಕ್ಷಣೆ ಪಡೆದರು. ☐

1. ..............................................................................................
2. ..............................................................................................
3. ..............................................................................................
4. ..............................................................................................
5. ..............................................................................................
6. ..............................................................................................
7. ..............................................................................................

### ನನ್ನಯ ಗೆಳೆಯ

ಗೆಳೆಯ ಗೆಳೆಯ ನನ್ನಯ ಗೆಳೆಯ
ಸ್ನೇಹವ ಪ್ರೀತಿಯ ನೀಡುವ ಗೆಳೆಯ
ಆಟಪಾಠದಿ ಜೊತೆಯಲಿ ಇರುವ
ಆಪತ್ಕಾಲದಿ ಸಹಾಯ ಮಾಡುವ
ಸುಖದುಃಖದಲಿ ಒಟ್ಟಿಗೆ ಇರುವ
ಗೆಳೆಯ ಗೆಳೆಯ ನನ್ನಯ ಗೆಳೆಯ

# 14. ಹಕ್ಕಿಯಂತೆ ಹಾರುವ



ಕಾ... ಕಾ...

ಕಾಗೆಯು ಮರಿಗಳನ್ನು ಕರೆಯಿತು. ಗೂಡಿನಲ್ಲಿ ಬೆಚ್ಚಗೆ ಮಲಗಿದ್ದ ಮರಿಗಳಿಗೆ ಎಚ್ಚರವಾಯಿತು. "ಅಮ್ಮಾ... ತುಂಬಾ ಚಳಿ. ಇನ್ನು ಸ್ವಲ್ಪ ಹೊತ್ತು ಮಲಗುವೆ" ಮರಿ ಹೇಳಿತು. "ಇಂದು ಕಾಡಿನಲ್ಲಿ ವಾರ್ಷಿಕೋತ್ಸವ ಅಲ್ಲವೇ.. ಬೇಗನೆ ಹೊರಡಿರಿ" ಅಮ್ಮ ಹೇಳಿತು. ವಾರ್ಷಿಕೋತ್ಸವ ಎಂದು ಕೇಳಿದಾಗ ಮರಿಗಳು ಬೇಗನೆ ಎದ್ದು ಹೊರಟವು. ಕಾಡಿಗೆ ತಲಪಿದಾಗ ಎಲ್ಲಾ ಪಕ್ಷಿಗಳು ಅಲ್ಲಿ ಬಂದು ಸೇರಿದ್ದವು.

ಯಾರೆಲ್ಲಾ ಬಂದಿರಬಹುದು? ಹೇಳಿರಿ.



ಎಲ್ಲರಿಗೂ ಬಹಳ ಸಂತೋಷ.
ಪಕ್ಷಿಗಳ ರಾಜನಾದ ಹದ್ದು ಹಾರಿ
ಬಂದು ಬಂಡೆಯ ಮೇಲೆ ಕುಳಿತಿತು.
ಎಲ್ಲರೂ ಅತ್ತ ನೋಡಿದರು.
"ಉತ್ತಮ ನಡತೆಯ ಹಕ್ಕಿಗೆ ಇಂದು
ಬಹುಮಾನವಿದೆ" ಹದ್ದು ಗಟ್ಟಿಯಾಗಿ
ಹೇಳಿತು. ಎಲ್ಲರಿಗೂ ಬಹಳ
ಸಂತೋಷವಾಯಿತು.





"ಇಂದಿನ ವಾರ್ಷಿಕೋತ್ಸವದ
ಕಾರ್ಯಕ್ರಮಗಳ ಕೊನೆಯಲ್ಲಿ
ಬಹುಮಾನ ಯಾರಿಗೆ ಎಂದು
ಘೋಷಿಸಲಾಗುವುದು"
ಹದ್ದು ಹೇಳಿತು.







# ನಾನೇ ಶ್ರೇಷ್ಠ


ನಾನು ಚೆನ್ನಾಗಿ ಶುಚಿಗೊಳಿಸಬಲ್ಲೆ.
ನನ್ನಷ್ಟು ಎತ್ತರಕ್ಕೆ ಹಾರುವವರು ಬೇರೆ ಯಾರೂ ಇಲ್ಲ.
ನಾನು ಈ ಕಾಡಿನಲ್ಲಿ ಇಂಪಾಗಿ ಹಾಡಬಲ್ಲೆ.
ನಾನು ಉತ್ತಮವಾಗಿ ನಾಟ್ಯ ಮಾಡಬಲ್ಲೆ.
ನನ್ನ ಮೈಬಣ್ಣ ಎಷ್ಟು ಚಂದ. ಕೆಂಪಾದ ತುಟಿಯೂ ನನಗಿದೆ.



"ಔತಣ ತಯಾರಾಗಿದೆ, ಎಲ್ಲರೂ ಬನ್ನಿರಿ. ನಿಮಗಿಷ್ಟವಾದ ಆಹಾರವನ್ನು ತೆಗೆದುಕೊಳ್ಳಿರಿ" ಮರಕುಟಿಗ ಕರೆಯಿತು.

## ಯಾರು ಏನನ್ನು ತಿಂದರು?



## ನಾನು ಯಾರು?



ಹಸಿರು ಮೈಬಣ್ಣ ಕೆಂಪು ಕೊಕ್ಕು

ನಾನು ಯಾರು?



ನಾನು ಬಹಳ ಚಂದ.

ಗರಿ ಕೆದರಿ ನಾಟ್ಯವಾಡುವೆ

ನಾನು ಯಾರು?



ಪಾರಿವಾಳ



ಔತಣದ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಾರಂಭವಾದುವು. ಎಲ್ಲಾ ಪಕ್ಷಿಗಳು ವೇದಿಕೆಯಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಿದ್ದುವು. ಕಾಗಕ್ಕ ಮಾತ್ರ ಔತಣದ ಪರಿಸರವನ್ನು ಶುಚಿಗೊಳಿಸುತ್ತಿತ್ತು.

ಹದ್ದು ಮರದ ಮೇಲೆ ಕುಳಿತು ಇದೆಲ್ಲವನ್ನೂ ನೋಡುತ್ತಿತ್ತು.

ತನ್ನ ಕೆಲಸವನ್ನು ಮುಗಿಸಿ ಆಯಾಸಗೊಂಡ ಕಾಗಕ್ಕ ಮರದ ಗೆಲ್ಲಿನಲ್ಲಿ ಕುಳಿತಿತು.

ಹದ್ದು ವೇದಿಕೆಗೆ ಬಂದಿತು. ವಾರ್ಷಿಕೋತ್ಸವದಲ್ಲಿ ಭಾಗವಹಿಸಿದ ಎಲ್ಲರನ್ನು ಅಭಿನಂದಿಸಿತು. "ಇಂದಿನ ಕಾರ್ಯಕ್ರಮದಲ್ಲಿ ನೀವೆಲ್ಲರೂ ನಿಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದೀರಿ. ಆ ಸಮಯದಲ್ಲಿ ಕಾಗಕ್ಕ ನಮ್ಮ ಕಾಡಿನ ಪರಿಸರವನ್ನು ಶುಚಿಗೊಳಿಸುತ್ತಿದ್ದಳು. ಆದುದರಿಂದ ಕಾಗಕ್ಕಳೇ ಇಂದಿನ ಬಹುಮಾನಕ್ಕೆ ಯೋಗ್ಯಳು" ಹದ್ದು ಘೋಷಿಸಿತು. ಎಲ್ಲರಿಗೂ ಕಾಗಕ್ಕನ ಹಿರಿಮೆ ತಿಳಿಯಿತು. ಎಲ್ಲರೂ ಕಾಗಕ್ಕನನ್ನು ಹೊಗಳಿದರು.



ಕಥೆಯಲ್ಲಿ ನಿಮಗೆ ಇಷ್ಟವಾದ ಪಕ್ಷಿ ಯಾವುದು?

ಯಾಕೆ ಇಷ್ಟವಾಯಿತು? ಬರೆಯಿರಿ.

ಹಾಡುವ

# ಚಿನ್ನದ ಮೊಟ್ಟೆ

ಒಂದು ಊರಿನಲ್ಲಿ
ಒಬ್ಬ ಗೌಡನಿದ್ದನು
ಅವನು ಒಂದು
ಬಾತುಕೋಳಿ ಸಾಕುತ್ತಿದ್ದನು





ದಿನಕೆ ಒಂದು ಹೊನ್ನ ಮೊಟ್ಟೆ
ಇಡುತಲಿದ್ದಿತು
ಅದನು ಕಂಡು ಗೌಡನಿಗೆ
ಆಸೆಯಾಯಿತು

ಆಸೆಯಿಂದ ಗೌಡ
ಉದ್ದ ಕತ್ತಿ ತಂದನು
ಕತ್ತಿಯಿಂದ ಅದರ
ಹೊಟ್ಟೆ ಕೊಯ್ದು ಬಿಟ್ಟನು





ರಕ್ತ ಸುರಿದು ಬಾತುಕೋಳಿ
ಸತ್ತು ಹೋಯಿತು
ಅದನು ಕಂಡು ಗೌಡನಿಗೆ
ದುಃಖವಾಯಿತು



ಹೊತ್ತು ಕತ್ತಲಾಯಿತು. ಪಕ್ಷಿಗಳೆಲ್ಲವೂ ತಮ್ಮ ತಮ್ಮ ಗೂಡುಗಳಿಗೆ ಹೊರಡುತ್ತಿದ್ದವು. ಗದ್ದಲ ಕೇಳಿ ಮಾವಿನಮರದ ಪೊಟರೆಯಲ್ಲಿ ಮಲಗಿದ್ದ ಗೂಬೆ ಎಚ್ಚರಗೊಂಡಿತು. ಪೊಟರೆಯಿಂದ ಹೊರಗೆ ಬಂದು ನೋಡಿತು. ಮರದಲ್ಲಿದ್ದ ಬಾವಲಿಯೂ ಎದ್ದು ನೋಡಿತು. "ಇದೇನು ಸದ್ದು?" ಗೂಡಿಗೆ ಮರಳುತ್ತಿದ್ದ ಗುಬ್ಬಚ್ಚಿಯೊಡನೆ ಕೇಳಿತು. ಗುಬ್ಬಚ್ಚಿಯು ವಾರ್ಷಿಕೋತ್ಸವದ ಸಂಭ್ರಮವನ್ನು ಅವರೊಡನೆ ಹೇಳಿತು. "ಹಗಲು ನಿದ್ದೆ ಮಾಡುವ ನಮಗೆ ಇದು ಯಾವುದೂ ತಿಳಿಯಲಿಲ್ಲ" ಬಾವಲಿ ಮತ್ತು ಗೂಬೆ ಹೇಳಿದವು.

## ಸಾಲು ಸೇರಿಸೋಣ

ಕಾ...ಕಾ... ಕಾಗೆ

ಕಪ್ಪು ಬಣ್ಣದ ಕಾಗೆ

ಹಾರಿ ಹಾರಿ ಬರುವೆ

ಕಾ... ಕಾ... ಕಾಗೆ





ಕೋ... ಕೋ... ಕೋಳಿ

..............................

ಓಡಿ ಓಡಿ ಬರುವೆ

..............................

ಕಿಯಾಂ... ಕಿಯಾಂ... ಗುಬ್ಬಿ

..................................................

..................................................

..................................................



# 15. ಫಳಫಳ ಉಡುಪು

## ಊರ ಜಾತ್ರೆ

ರಾಗಿಣಿಯ ಊರಿನ ಜಾತ್ರೆ. ರಾಗಿಣಿಗೆ ಅಪ್ಪ ಹೊಸ ಉಡುಪು ತಂದುಕೊಟ್ಟರು. ಬಣ್ಣ ಬಣ್ಣದ ಹೂಗಳಿರುವ ಉಡುಪು. ರಾಗಿಣಿ ಹೊಸ ಉಡುಪು ಧರಿಸಿದಳು. ಕನ್ನಡಿಯ ಮುಂದೆ ನಿಂತು ಅಲಂಕರಿಸಿ ಕೊಂಡಳು. 'ಆಹಾ! ನಮ್ಮ ಮುದ್ದಿನ ಚೆಲುವೆ' ಅಪ್ಪ ಅಮ್ಮ ಅವಳನ್ನು ಅಪ್ಪಿಕೊಂಡರು.

## ಬಣ್ಣ ಹಚ್ಚುವ

ಹೂಗಳಿಗೆ

ಲಂಗಕ್ಕೆ



ಕೈಗಳಿಗೆ

ರವಿಕೆಗೆ

# ಇದು ಯಾವ ಉಡುಪು?













## ಯಾವ ಉಡುಪು ಯಾರಿಗೆ?

| ಅಪ್ಪ | ಅಮ್ಮ | ಅಕ್ಕ | ತಮ್ಮ |
|---|---|---|---|
| * | * | * | * |
| * | * | * | * |

- ಅಪ್ಪ ಪ್ಯಾಂಟು, ಅಂಗಿ ಧರಿಸುತ್ತಾರೆ.
- 
- 
- 



ಇವರು ಮಾಲಿನಿ. ಇವರು .................... ಕೆಲಸ ಮಾಡುತ್ತಿದ್ದಾರೆ. ಹೊಲಿಯಲು .................... ಯಂತ್ರ ಬೇಕು. ಮಾಲಿನಿ ............................. ಉಡುಪುಗಳನ್ನು ಹೊಲಿಯುತ್ತಾರೆ. ..........................................................................................

## ನಿಮಗೆ ಇಷ್ಟವಾದ ಉಡುಪಿನ ಕುರಿತು ಬರೆಯಿರಿ.

## ಕಾಲಕ್ಕೆ ತಕ್ಕ ಉಡುಪುಗಳು







| | | |
|---|---|---|
| ಚಳಿಗಾಲ | | |
| ಉಣ್ಣೆ ಬಟ್ಟೆ | ನೈಲಾನ್ ಬಟ್ಟೆ | ಹತ್ತಿ ಬಟ್ಟೆ |

## ನಮಗೆಲ್ಲಾ ಸಮವಸ್ತ್ರಗಳು







ಶಾಲಾ ಮಕ್ಕಳು

ದಾದಿ

ಪೋಲೀಸ್





ಸೈನಿಕ

ಹಸಿರು ಸೇನೆ

# 16. ಸವಾರಿ ಮಾಡೋಣ




## ರಶ್ಮಿಯ ರೈಲು ಪ್ರಯಾಣ

ನಾನು ಅಪ್ಪ ಅಮ್ಮನ ಜೊತೆಗೆ ಮಾವನ ಮನೆಗೆ ಹೊರಟೆನು. ಅಮ್ಮನ ಕೈ ಹಿಡಿದು ರೈಲುಗಾಡಿ ಹತ್ತಿದೆನು. ಸೀಟಿ ಹಾಕುತ್ತಾ ಚುಕು ಬುಕು ಚುಕು ಬುಕು ರೈಲು ಹೊರಟಿತು. ಹೊಳೆ, ತೋಡು, ಸೇತುವೆ, ಪಟ್ಟಣಗಳನ್ನು ದಾಟಿ ರೈಲು ಮುಂದೆ ಸಾಗಿತು. ವೇಗವಾಗಿ ಓಡುತ್ತಾ ತಿರುವನಂತಪುರ ರೈಲು ನಿಲ್ದಾಣಕ್ಕೆ ತಲುಪಿತು.

ರೈಲು ನಿಲ್ದಾಣದಲ್ಲಿ ಇಳಿದ ರಶ್ಮಿಗೆ ಆಶ್ಚರ್ಯವಾಯಿತು. ಅಬ್ಬಾ.... ಎಷ್ಟು ಉದ್ದವಾದ ಗಾಡಿ! ಎಷ್ಟೊಂದು ಜನರು. ರೈಲು ನಿಲ್ದಾಣದಲ್ಲಿ ಗದ್ದಲವೇ ಗದ್ದಲ.

ಅಲ್ಲಿಂದ ಹೊರಗೆ ಬಂದಾಗ ಸಾಲು ಸಾಲು ವಾಹನಗಳು ನಿಂತಿದ್ದುವು.

## ಹೇಳಿರಿ ಹೇಳಿರಿ ನಾನು ಯಾರು?

ಟುರು ಟುರು ಟುರು ಟುರು
ಟುರು ಟುರು ಗಾಡಿ
ಮೂರು ಚಕ್ರ ಇರುವ ಗಾಡಿ
ರಸ್ತೆಯ ಮೇಲೆ ಸಾಗುವ ಗಾಡಿ
ಇಂಧನ ಬಳಸಿ ಓಡುವ ಗಾಡಿ
ಟುರು ಟುರು ಟುರು ಟುರು
ಟುರು ಟುರು ಗಾಡಿ



ಆಟೋರಿಕ್ಷಾದಲ್ಲಿ ಅವರು ನೇರವಾಗಿ ಮಾವನ ಮನೆಗೆ ತಲುಪಿದರು. ಅಂಗಳದಲ್ಲಿ ರಾಜು ಸೈಕಲಿನಲ್ಲಿ ಕಿಣಿಕಿಣಿ ಸದ್ದು ಮಾಡುತ್ತಾ ಆಟ ಆಡುತ್ತಿದ್ದನು. "ಅರೆ... ಕಿಣಿಕಿಣಿ ಸೈಕಲು" ರಶ್ಮಿಗೂ ಸೈಕಲಿನಲ್ಲಿ ಆಡುವ ಆಸೆಯಾಯಿತು. "ರಾಜೂ, ನನಗೆ ಸೈಕಲು ಕೊಡುವೆಯಾ?" ರಾಜು ರಶ್ಮಿಗೆ ಸೈಕಲು ನೀಡಿದನು.

ಅವಳಿಗೆ ಬಹಳ ಸಂತೋಷವಾಯಿತು.





ಸಂಜೆಯಾಯಿತು. ಮಕ್ಕಳೆಲ್ಲರೂ ಅಜ್ಜನ ಜೊತೆ ಸಮುದ್ರ ತೀರಕ್ಕೆ ಹೊರಟರು. ಅಲ್ಲಿ ಕರಾವಳಿ ಉತ್ಸವದ ಸಂಭ್ರಮ. ಸಂತೆಯಲ್ಲಿ ನೆರೆದ ಜನರು, ತರತರದ ತಿಂಡಿಗಳು, ಆಟಿಕೆಗಳ ಸಾಲು ಸಾಲು ಅಂಗಡಿಗಳು.

ಕಿರ್ರನೆ ಕಿರುಚುವ ತಿರುಗು ತೊಟ್ಟಿಲಿನ ಸದ್ದು ಕೇಳಿ  ರಶ್ಮಿ ಮತ್ತು ರಾಜು ಅತ್ತ ಓಡಿದರು. "ಅಲ್ಲಿ ನೋಡು. ಎತ್ತರದಲ್ಲಿ ತಿರುಗುವ ತೊಟ್ಟಿಲು." ರಾಜು ಹೇಳಿದನು.  "ಅದೇನು?" ಆಕಾಶದತ್ತ ಕೈ ತೋರಿಸುತ್ತಾ ರಶ್ಮಿ ಕೇಳಿದಳು. "ಅದುವೇ ಗಾಳಿಪಟ." ಅಜ್ಜ ಹೇಳಿದರು.






ರಾಜು ಮತ್ತು
ರಶ್ಮಿ ಆಟಗಳನ್ನು
ಆಡಿದರು.
ಅಜ್ಜನ ಜೊತೆ ಅಲ್ಲೆಲ್ಲಾ ಸುತ್ತಾಡಿ
ಆಟಿಕೆಯ ಅಂಗಡಿಗೆ ತಲುಪಿದರು.
ಅಂಗಡಿಯಲ್ಲಿ ಅವರು ಕಂಡ ಆಟಿಕೆಗಳು
ಯಾವುವೆಲ್ಲಾ?

**ನೀರಿನಲ್ಲಿ, ನೆಲದಲ್ಲಿ ಮತ್ತು ಆಕಾಶದಲ್ಲಿ ಸಂಚರಿಸುವ ವಾಹನಗಳು ಯಾವುವು?**



## ನಾನು ಯಾರು?

ರೆಕ್ಕೆಯಿದೆ  ಹಕ್ಕಿಯಲ್ಲ
ಬಾಲ ಇದೆ  ಮಂಗ ಅಲ್ಲ
ಆಕಾಶದಲ್ಲಿ ಹಾರುವೆನು
ನಾನು ಯಾರು?



ನೀರಿನಲ್ಲಿ ಚಲಿಸುವೆ
ಚಕ್ರಗಳಿಲ್ಲದೆ ಓಡುವೆ
ಜನರನ್ನು ಹೊತ್ತು ಸಾಗುವೆ
ನಾನು ಯಾರು?



..................................
..................................
..................................
..................................



## ನನ್ನ ಪ್ರಯಾಣದ ಅನುಭವ



# 17. ಒಂದಾಗಿ ಬಾಳುವ

ಚಂಪಕವನದಲ್ಲಿ ಚಂದನ ನದಿಯು ಹರಿಯುತ್ತಿತ್ತು. ನದಿಯ ದಡದಲ್ಲಿ ಒಂದು ದೊಡ್ಡ ಮರವಿತ್ತು. ಪಾರಿವಾಳವೊಂದು ಮರದಲ್ಲಿ ಕುಳಿತು ಹಣ್ಣು ತಿನ್ನುತ್ತಿತ್ತು. "ಅಯ್ಯೋ, ಕಾಪಾಡಿ ಕಾಪಾಡಿ...." ನದಿಯಿಂದ ಯಾರೋ ಅಳುತ್ತಿರುವುದು ಕೇಳಿಸಿತು. ಪಾರಿವಾಳ ಬಗ್ಗಿ ನೋಡಿತು. ಇರುವೆಯೊಂದು ನೀರಿನಲ್ಲಿ ಮುಳುಗುವ ಸ್ಥಿತಿಯಲ್ಲಿತ್ತು. ಪಾರಿವಾಳಕ್ಕೆ ಇರುವೆಯ ಅವಸ್ಥೆಯನ್ನು ಕಂಡು ಪಾಪ ಅನಿಸಿತು. ಅದು ಏನು ಮಾಡಿರಬಹುದು?







.............................................................

.............................................................

.............................................................

.............................................................

.............................................................

.............................................................





.............................................................

.............................................................

.............................................................

.............................................................

.............................................................

.............................................................

**ಈ ಕಥೆ ನೀಡುವ ಸಂದೇಶವೇನು?**



ಪಾರಿವಾಳ ಇರುವೆಯ ಬಳಿಗೆ ಬಂತು. ಇರುವೆ ಗಡಗಡ ನಡುಗುತ್ತಿತ್ತು. "ಹೆದರಬೇಡ, ನಿನ್ನ ಜೊತೆಗೆ ನಾನೂ ಮನೆಗೆ ಬರುತ್ತೇನೆ" ಪಾರಿವಾಳ ಸಮಾಧಾನ ಹೇಳಿತು. ಇಬ್ಬರು ಮನೆ ಇರುವ ಮರದ ಬಳಿ ತಲುಪಿದರು. "ನನ್ನ ಮನೆ ಅಲ್ಲಿದೆ" ಇರುವೆ ತೋರಿಸಿತು. "ಈ ಮರದಲ್ಲಿಯಾರೆಲ್ಲಾ ಇದ್ದಾರೆ?" ಪಾರಿವಾಳ ಕೇಳಿತು.

ನೀವು ಹೇಳುವಿರಾ?

## ಇರುವೆಯನ್ನು ಗೂಡಿಗೆ ಸೇರಿಸುವ







| | | |
|---|---|---|
| ಅಮ್ಮ ಇರುವೆ | : | ಹೇಗೆ ಒದ್ದೆಯಾದೆ? |
| ಇರುವೆ | : | ನೀರಿಗೆ ಬಿದ್ದೆನು. |
| ಅಮ್ಮ ಇರುವೆ | : | ನೀರಿಗೆ ಬಿದ್ದುದು ಹೇಗೆ? |
| ಇರುವೆ | : | ಗಾಳಿ ಬೀಸಿದಾಗ ಕಾಲು ಜಾರಿ ನೀರಿಗೆ ಬಿದ್ದೆನು. |
| ಅಮ್ಮ ಇರುವೆ | : | ಮೇಲೆ ಬರಲು ಸಹಾಯ ಮಾಡಿದವರು ಯಾರು? |
| ಇರುವೆ | : | ಈ ಪಾರಿವಾಳ ನನಗೆ ಸಹಾಯ ಮಾಡಿತು. |
| ಅಮ್ಮ ಇರುವೆ | : | ಸಹಾಯ ಮಾಡಿದ ನಿನಗೆ ತುಂಬಾ ಧನ್ಯವಾದಗಳು. |
| ಪಾರಿವಾಳ | : | ಅದಕ್ಕೇನಂತೆ. ಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕಾದುದು ನಮ್ಮ ಕರ್ತವ್ಯ. |



# ಇವರಿಗೆ ಯಾವ ರೀತಿಯ ಸಹಾಯವನ್ನು ಮಾಡಬಹುದು?









# ಕಾಗುಣಿತ ಅಕ್ಷರಗಳು

| ˇ | ಾ | ಿ | ೀ | ು | ೂ | ೃ | ೆ | ೇ | ೈ | ೊ | ೋ | ೌ | ಂ | ಃ |
|---|---|---|---|---|---|---|---|---|---|---|---|---|---|---|
| ಅ | ಆ | ಇ | ಈ | ಉ | ಊ | ಋ | ಎ | ಏ | ಐ | ಒ | ಓ | ಔ | ಅಂ | ಅಃ |
| ಕ | ಕಾ | ಕಿ | ಕೀ | ಕು | ಕೂ | ಕೃ | ಕೆ | ಕೇ | ಕೈ | ಕೊ | ಕೋ | ಕೌ | ಕಂ | ಕಃ |
| ಖ | ಖಾ | ಖಿ | ಖೀ | ಖು | ಖೂ | ಖೃ | ಖೆ | ಖೇ | ಖೈ | ಖೊ | ಖೋ | ಖೌ | ಖಂ | ಖಃ |
| ಗ | ಗಾ | ಗಿ | ಗೀ | ಗು | ಗೂ | ಗೃ | ಗೆ | ಗೇ | ಗೈ | ಗೊ | ಗೋ | ಗೌ | ಗಂ | ಗಃ |
| ಘ | ಘಾ | ಘಿ | ಘೀ | ಘು | ಘೂ | ಘೃ | ಘೆ | ಘೇ | ಘೈ | ಘೊ | ಘೋ | ಘೌ | ಘಂ | ಘಃ |
| ಚ | ಚಾ | ಚಿ | ಚೀ | ಚು | ಚೂ | ಚೃ | ಚೆ | ಚೇ | ಚೈ | ಚೊ | ಚೋ | ಚೌ | ಚಂ | ಚಃ |
| ಛ | ಛಾ | ಛಿ | ಛೀ | ಛು | ಛೂ | ಛೃ | ಛೆ | ಛೇ | ಛೈ | ಛೊ | ಛೋ | ಛೌ | ಛಂ | ಛಃ |
| ಜ | ಜಾ | ಜಿ | ಜೀ | ಜು | ಜೂ | ಜೃ | ಜೆ | ಜೇ | ಜೈ | ಜೊ | ಜೋ | ಜೌ | ಜಂ | ಜಃ |
| ಝ | ಝಾ | ಝಿ | ಝೀ | ಝು | ಝೂ | ಝೃ | ಝೆ | ಝೇ | ಝೈ | ಝೊ | ಝೋ | ಝೌ | ಝಂ | ಝಃ |
| ಟ | ಟಾ | ಟಿ | ಟೀ | ಟು | ಟೂ | ಟೃ | ಟೆ | ಟೇ | ಟೈ | ಟೊ | ಟೋ | ಟೌ | ಟಂ | ಟಃ |
| ಠ | ಠಾ | ಠಿ | ಠೀ | ಠು | ಠೂ | ಠೃ | ಠೆ | ಠೇ | ಠೈ | ಠೊ | ಠೋ | ಠೌ | ಠಂ | ಠಃ |
| ಡ | ಡಾ | ಡಿ | ಡೀ | ಡು | ಡೂ | ಡೃ | ಡೆ | ಡೇ | ಡೈ | ಡೊ | ಡೋ | ಡೌ | ಡಂ | ಡಃ |
| ಢ | ಢಾ | ಢಿ | ಢೀ | ಢು | ಢೂ | ಢೃ | ಢೆ | ಢೇ | ಢೈ | ಢೊ | ಢೋ | ಢೌ | ಢಂ | ಢಃ |
| ಣ | ಣಾ | ಣಿ | ಣೀ | ಣು | ಣೂ | ಣೃ | ಣೆ | ಣೇ | ಣೈ | ಣೊ | ಣೋ | ಣೌ | ಣಂ | ಣಃ |
| ತ | ತಾ | ತಿ | ತೀ | ತು | ತೂ | ತೃ | ತೆ | ತೇ | ತೈ | ತೊ | ತೋ | ತೌ | ತಂ | ತಃ |
| ಥ | ಥಾ | ಥಿ | ಥೀ | ಥು | ಥೂ | ಥೃ | ಥೆ | ಥೇ | ಥೈ | ಥೊ | ಥೋ | ಥೌ | ಥಂ | ಥಃ |
| ದ | ದಾ | ದಿ | ದೀ | ದು | ದೂ | ದೃ | ದೆ | ದೇ | ದೈ | ದೊ | ದೋ | ದೌ | ದಂ | ದಃ |
| ಧ | ಧಾ | ಧಿ | ಧೀ | ಧು | ಧೂ | ಧೃ | ಧೆ | ಧೇ | ಧೈ | ಧೊ | ಧೋ | ಧೌ | ಧಂ | ಧಃ |
| ನ | ನಾ | ನಿ | ನೀ | ನು | ನೂ | ನೃ | ನೆ | ನೇ | ನೈ | ನೊ | ನೋ | ನೌ | ನಂ | ನಃ |
| ಪ | ಪಾ | ಪಿ | ಪೀ | ಪು | ಪೂ | ಪೃ | ಪೆ | ಪೇ | ಪೈ | ಪೊ | ಪೋ | ಪೌ | ಪಂ | ಪಃ |
| ಫ | ಫಾ | ಫಿ | ಫೀ | ಫು | ಫೂ | ಫೃ | ಫೆ | ಫೇ | ಫೈ | ಫೊ | ಫೋ | ಫೌ | ಫಂ | ಫಃ |
| ಬ | ಬಾ | ಬಿ | ಬೀ | ಬು | ಬೂ | ಬೃ | ಬೆ | ಬೇ | ಬೈ | ಬೊ | ಬೋ | ಬೌ | ಬಂ | ಬಃ |
| ಭ | ಭಾ | ಭಿ | ಭೀ | ಭು | ಭೂ | ಭೃ | ಭೆ | ಭೇ | ಭೈ | ಭೊ | ಭೋ | ಭೌ | ಭಂ | ಭಃ |
| ಮ | ಮಾ | ಮಿ | ಮೀ | ಮು | ಮೂ | ಮೃ | ಮೆ | ಮೇ | ಮೈ | ಮೊ | ಮೋ | ಮೌ | ಮಂ | ಮಃ |
| ಯ | ಯಾ | ಯಿ | ಯೀ | ಯು | ಯೂ | ಯೃ | ಯೆ | ಯೇ | ಯೈ | ಯೊ | ಯೋ | ಯೌ | ಯಂ | ಯಃ |
| ರ | ರಾ | ರಿ | ರೀ | ರು | ರೂ | ರೃ | ರೆ | ರೇ | ರೈ | ರೊ | ರೋ | ರೌ | ರಂ | ರಃ |
| ಲ | ಲಾ | ಲಿ | ಲೀ | ಲು | ಲೂ | ಲೃ | ಲೆ | ಲೇ | ಲೈ | ಲೊ | ಲೋ | ಲೌ | ಲಂ | ಲಃ |
| ವ | ವಾ | ವಿ | ವೀ | ವು | ವೂ | ವೃ | ವೆ | ವೇ | ವೈ | ವೊ | ವೋ | ವೌ | ವಂ | ವಃ |
| ಶ | ಶಾ | ಶಿ | ಶೀ | ಶು | ಶೂ | ಶೃ | ಶೆ | ಶೇ | ಶೈ | ಶೊ | ಶೋ | ಶೌ | ಶಂ | ಶಃ |
| ಷ | ಷಾ | ಷಿ | ಷೀ | ಷು | ಷೂ | ಷೃ | ಷೆ | ಷೇ | ಷೈ | ಷೊ | ಷೋ | ಷೌ | ಷಂ | ಷಃ |
| ಸ | ಸಾ | ಸಿ | ಸೀ | ಸು | ಸೂ | ಸೃ | ಸೆ | ಸೇ | ಸೈ | ಸೊ | ಸೋ | ಸೌ | ಸಂ | ಸಃ |
| ಹ | ಹಾ | ಹಿ | ಹೀ | ಹು | ಹೂ | ಹೃ | ಹೆ | ಹೇ | ಹೈ | ಹೊ | ಹೋ | ಹೌ | ಹಂ | ಹಃ |
| ಳ | ಳಾ | ಳಿ | ಳೀ | ಳು | ಳೂ | ಳೃ | ಳೆ | ಳೇ | ಳೈ | ಳೊ | ಳೋ | ಳೌ | ಳಂ | ಳಃ |

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in